ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.

ಸಿ.ಸಿ ನಂಬರ್‌ಃ **389/2022**

ಪಿರ್ಯಾದಿಃ ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸ್,
ಮೂಡಿಗೆರೆ.

ವಿರುದ್ಧ

ಆರೋಪಿಃ ಮಂಜು, ವಯಸ್ಸು ಸುಮಾರು 35 ವರ್ಷ,
ಬಿನ್ ಬಾಬು, ವಾಸಃ ಕಿತ್ತಲೆಗಂಡಿ,
ದಾರದಹಳ್ಳಿ ಗ್ರಾಮ, ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

* * * * *

ದಂಡ ಪ್ರಕ್ರಿಯಾ ಸಂಹಿತೆ **313** ರ ಅಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರಃ

ಪ್ರಶ್ನೆಃ 2) ಪ್ರಾಸಾ-1 ಸಲಿತಾ ರವರು ತಮ್ಮ ಸಾಕ್ಷ್ಯದಲ್ಲಿ ಅವರು ಕಿತ್ತಳೆಗಂಡಿ ಗ್ರಾಮದಲ್ಲಿ ಅವರ ಗಂಡ ಮತ್ತು ಮಕ್ಕಳೊಂದಿಗೆ ವಾಸವಾಗಿದ್ದು, ಆಗ ಆರೋಪಿಯಾದ ನೀವು ಅವರಿಗೆ ಪರಿಚಯವಾಗಿದ್ದು, ನೀವು ಅವರ ಜೊತೆ ಪೋನಿನಲ್ಲಿ ಮಾತನಾಡುತ್ತಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 3) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತುಂಬಾ ಬಾರಿ ಆರೋಪಿ ಅವರ ಮನೆಗೆ ಬಂದು ಅವರ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿದ್ದು, ನೀವು ಅವರ ಮುಖಕ್ಕೆ ಹೊಡೆದು ಬಟ್ಟೆಯನ್ನು ಹರಿದಿದ್ದು, ಆ ವಿಚಾರವನ್ನು ಅವರ ಗಂಡನಿಗೆ ಹೇಳುತ್ತೇನೆ ಹಾಗೂ ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 4) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ18.11.2021 ರಂದು ರಾತ್ರಿ 10 ಗಂಟೆಗೆ ಅವರು ಮನೆಯಲ್ಲಿದ್ದಾಗ, ನೀವು ಅವರ ಮನೆಗೆ ಬಂದು ಅವರ ಬಟ್ಟೆಯನ್ನು ಎಳೆದು ಅತ್ಯಾಚಾರ ಮಾಡಲು ಪ್ರಯತ್ನಿಸಿಸಿದ್ದು, ಆ ವಿಚಾರವನ್ನು ಚಾಸಾ-2, 4 ಮತ್ತು 5 ರವರಿಗೆ ತಿಳಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 5) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮನ್ನು ಚಾಸಾ-4 ಮತ್ತು 5 ರವರು ಕರೆಯಿಸಿ ಪಂಚಾಯಿತಿಯನ್ನು ಮಾಡಿದ್ದು, ಆ ಪಂಚಾಯಿತಿಯಲ್ಲಿ ಆರೋಪಿಯಾದ ನೀವು ಊರು ಬಿಟ್ಟು ಹೋಗುವಂತೆ ಹೇಳಿದ್ದರೂ ಸಹ, ಊರು ಬಿಟ್ಟು ಹೋಗಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 6) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಲು ಹೋಗಿ, ಹಾಗೆಯೇ ವಾಪಾಸು ಬಂದಿದ್ದು, ಆರೋಪಿಯಾದ ನೀವು ಅವರ ವಿರುದ್ದ ಅಪಪ್ರಚಾರ ಮಾಡಿಕೊಂಡು ಊರಿನಲ್ಲಿ ತಿರುಗಾಡಿಕೊಂಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 7) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ21.11.2021 ರಂದು ಬೆಳಿಗ್ಗೆ 10 ಗಂಟೆಗೆ ಅವರ ಮನೆಯಲ್ಲಿ ತಂದಿಟ್ಟಿದ ಬಾಳೆಯ ಕೀಟನಾಶಕವನ್ನು ಕುಡಿದು ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 8) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ವಿಚಾರವನ್ನು ಅವರು ಅವರ ಗಂಡನಿಗೆ ಪೋನು ಮಾಡಿ ತಿಳಿಸಿದ್ದು, ಅವರು ಕೆಲಸದಿಂದ ವಾಪಾಸು ಬಂದು ಅವರನ್ನು ಮೂಡಿಗೆರೆಯ ಆಸ್ಪತ್ರೆಗೆ ದಾಖಲಿಸಿದ್ದು, ನಂತರ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಆಸ್ಪತ್ರೆಗೆ ದಾಖಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 9) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಲ್ಲಿ ದಿನಾಂಕಃ 22.11.2021 ರಂದು ಪೊಲೀಸರು ಬಂದು ಅವರ ಹೇಳಿಕೆ ದೂರನ್ನು ಪಡೆದು, ದಿನಾಂಕಃ02.12.2021 ರಂದು ಅವರು ನ್ಯಾಯಾಧೀಶರ ಮುಂದೆ ಅವರ ಹೇಳಿಕೆಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 10) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ04.12.2021 ರಂದು

11.45 ರಿಂದ 12.45 ರ ಅವದಿಯಲ್ಲಿ ಪೊಲೀಸರು ಅವರ ಮನೆಗೆ ಬಂದು ಚಾಸಾ-7 ಮತ್ತು 8 ರವರ ಸಮಕ್ಷಮ ಘಟನಾ ನಡೆದ ಸ್ಥಳದ ಪಂಚನಾಮೆ ಮಾಡಿ ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 11) ಪ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ06.12.2021 ರಂದು ಪೊಲೀಸರು ಕೀಟನಾಶಕ ಪ್ಯಾಕೆಟುಗಳನ್ನು ತರಲು ಹೇಳಿದ್ದು ಅದರಂತೆ ಅವರು ಅವುಗಳನ್ನು ಅವರಿಗೆ ನೀಡಿದ್ದು, ಆ ಸಂಬಂಧ ಪಂಚನಾಮೆ ಮಾಡಿ ಜಪ್ತು ಮಾಡಿ, ಆ ಕಾಲಕ್ಕೆ ಚಾಸಾ-9 ಮತ್ತು 10 ಇದ್ದರು ಹಾಗೂ ಅಲ್ಲಿಯೂ ಸಹ ಫೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 12) ಪ್ರಾಸಾ-2 ಸುರೇಶ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.18.11.2021 ರಂದು ರಾ.10.00 ಗಂಟೆ ಸಮಯಕ್ಕೆ ಅವರು ಇಲ್ಲದಿದ್ದಾಗ ಆರೋಪಿಯು ಅವರ ಮನೆಗೆ ಬಂದು ಚಾಸಾ-1 ರವರ ಮೇಲೆ ಬಲತ್ಕಾರ ಮಾಡಲು ಪ್ರಯತ್ನಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 13) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದಕ್ಕೆ ಚಾಸಾ-1 ರವರು ವಿರೋಧಿಸಿದಾಗ ಆರೋಪಿಯು ಚಾಸಾ-1 ರವರ ಮುಖಕ್ಕೆ ತನ್ನ ಕೈಯಿಂದ ಹೊಡೆದು ಚಾಸಾ-1 ರವರ ಮೈಮೇಲೆ ಇದ್ದ ಬಟ್ಟೆಯನ್ನು ಹರಿದು ಹಾಕಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 14) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ವಿಚಾರವನ್ನು ನಿನ್ನ ಗಂಡನಿಗೆ ಹೇಳಿದರೆ ಅವರನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ಚಾಸಾ-1 ರವರು ಅವರಿಗೆ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 15) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಆ ದಿನ ಅವರು ರಾ.10.30 ಕ್ಕೆ ಕೆಲಸ ಮುಗಿಸಿ ಮನೆಗೆ ವಾಪಸ್ಸು ಬಂದಾಗ. ಚಾಸಾ-1 ರವರು ರಾ.11.15 ರ ಸಮಯಕ್ಕೆ ಎಲ್ಲಾ ವಿಚಾರವನ್ನು ಅವರಿಗೆ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 16) ಪ್ರಾಸಾ-2 ರವರು ಮುಂದುವರೆದು ಮರುದಿನ ದಿ.19.11.2021 ರಂದು ಅವರು ಚಾಸಾ-4 ರಿಂದ 6 ರವರಿಗೆ ಸದರಿ ವಿಷಯವನ್ನು ತಿಳಿಸಿದಾಗ ಅವರು ಆರೋಪಿಯನ್ನು ಕರೆಸಿ ವಿಚಾರ ಮಾಡಿ ಬುದ್ಧಿ ಹೇಳಿದರೂ ಸಹ ಆರೋಪಿ ತನ್ನ ಚಾಳಿ ಮುಂದುವರಸಿ ಚಾಸಾ-1 ರವರನ್ನು ಬಲತ್ಕಾರ ಮಾಡಿರುವುದಾಗಿ ಊರಿನವರೊಂದಿಗೆ ಹೇಳಿಕೊಂಡು ತಿರುಗಾಡಿದ್ದಾರೆ ತಮ್ಮ ಸಾಕ್ಷ್ಯದಲ್ಲಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 17) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಕಾರಣಕ್ಕಾಗಿ ಚಾಸಾ-1 ರವರು ಮನನೊಂದು ದಿ.21.11.2021 ರಂದು ಮನೆಯಲ್ಲಿ ಇದ್ದ ಕೀಟನಾಶಕವನ್ನು ಕುಡಿದು ಸಾಯುತ್ತಿದ್ದೇನೆ ಎಂದು ಬೆ.10.00 ಗಂಟೆ ಅವರಿಗೆ ಕರೆ ಮಾಡಿ ಹೇಳಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 18) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ತಕ್ಷಣ ಅವರು ಮನೆಗೆ ಬಂದು ಚಾಸಾ-1 ರವರನ್ನು ಯಾವುದೋ ವಾಹನದ ಮೂಲಕ ಮೂಡಿಗೆರೆ ಸರ್ಕಾರಿ ಆಸ್ಪತ್ರೆಗೆ ಸೇರಿಸಿ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಹಾಸನ ಸರ್ಕಾರಿ ಆಸ್ಪತ್ರೆಗೆ ಸೇರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 19) ಪ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.22.11.2021 ರಂದು ಮೂಡಿಗೆರೆ ಪೋಲಿಸರು ಹಾಸನದ ಆಸ್ಪತ್ರೆಗೆ ಬಂದು ಚಾಸಾ-1 ರವರನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 20) ಪ್ರಾಸಾ-3 ಪ್ರದೀನ್ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.18.11.2021 ರಂದು ರಾ.10.00 ಗಂಟೆ ಸಮಯಕ್ಕೆ ಆರೋಪಿಯು ಚಾಸಾ-1 ರವರ ಮನೆಗೆ ಹೋಗಿ ಅವರನ್ನು ಬಲತ್ಕಾರ ಮಾಡಲು ಪ್ರಯತ್ನಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 21) ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯಕ್ಕೆ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಹೊಡೆದು, ಅವರ ಬಟ್ಟೆ ಹರಿದು ನಿನ್ನ ಗಂಡನಿಗೆ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಚಾಸಾ-2 ರವರು ಮರುದಿನ ಅಂದರೆ ದಿ.19.11.2021 ರಂದು ಅವರಿಗೆ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 22) ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು, ಚಾಸಾ-5 ಮತ್ತು 6 ಹಾಗೂ ಊರಿನವರು ಚಾಸಾ-1 ರವರ ಮನೆಗೆ ಹೋಗಿ ಚಾಸಾ-1 ರವರನ್ನು ವಿಚಾರಿಸಿದಾಗ ಅವರು ಸಹಾ ಮೇಲೆ ಹೇಳಿದ ವಿಚಾರವನ್ನು ಅವರ ಬಳಿ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 23) ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನಿಮ್ಮನ್ನು ಕರೆಸಿ ಅವರು ಬುದ್ಧಿ ಹೇಳಿ, ಬಾಡಿಗೆ ಮನೆ ಖಾಲಿ ಮಾಡಿ ಬೇರೆ ಕಡೆ ಹೋಗುವಂತೆ ಹೇಳಿದ್ದೆವು, ಆದರೂ ಸಹಾ ನೀವು ಬೇರೆ ಕಡೆ ಹೋಗದೇ ಚಾಸಾ-1 ರವರಿಗೆ ಹಾಗೂ ಊರಿನವರಿಗೆ ತೊಂದರೆ ಕೊಡುತ್ತಿರುತ್ತೀರ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 24) ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.21.11.2021 ರಂದು ಚಾಸಾ-1 ರವರು ವಿಷ ಕುಡಿದಿರುವುದಾಗಿ ಅವರಿಗೆ ತಿಳಿಯಿತು, ಅವರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಬಂದು ಅಲ್ಲಿಂದ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಮನೆಗೆ ಕರೆದುಕೊಂಡು ಬಂದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 25) ಪ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪೋಲಿಸರು ಅವರನ್ನು ವಿಚಾರಿಸಿದಾಗ ದಿ.04.12.2021 ರಂದು ಮೇಲಿನ ವಿಚಾರವನ್ನೇ ಪೋಲಿಸರ ಬಳಿ ಹೇಳಿದ್ದೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 26) ಪ್ರಾಸಾ-4 ಕೃಷ್ಣಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.04.12.2021 ರಂದು ಪೋಲಿಸರು ಅವರ ಊರಿಗೆ ಬಂದು ಅವರಿಗೆ ಮತ್ತು ಚಾಸಾ-8 ರವರಿಗೆ ನೋಟೀಸು ಕೊಟ್ಟು ಆರೋಪಿಯು

ಚಾಸಾ-1 ರವರನ್ನು ಬಲತ್ಕಾರ ಮಾಡಲು ಪ್ರಯತ್ನಿಸಿದರು ಎಂದು ತಿಳಿಸಿ ಚಾಸಾ-2 ರವರ ಮನೆಗೆ ಕರೆದುಕೊಂಡು ಹೋದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 27) ಪ್ರಾಸಾ-4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅಲ್ಲಿ ಕೊಟ್ಟಿಯಲ್ಲಿ ಮಹಜರ್ ಬರೆದು ಪೋಟೋ ತೆಗೆದಿದ್ದಾರೆ ಮತ್ತು ಮಹಜರ್ ಕಾಲಕ್ಕೆ ಪೋಲಿಸರು ಚಾಸಾ-1 ರವರ ನೈಟಿ ವಶಕ್ಕೆ ಪಡೆದಿದ್ದಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 28) ಪ್ರಾಸಾ-5 ಹನುಮಂತ ರವರು ತಮ್ಮ ಸಾಕ್ಷ್ಯದಲ್ಲಿ ಅವರು ಮತ್ತು ಚಾಸಾ-10 ರವರು ಮೂಡಿಗೆರೆ ಪೋಲಿಸ್ ಠಾಣೆಯ ಮುಂದೆ ಹೋಗುತ್ತಿರುವಾಗ ಪೋಲಿಸರು ಅವರನ್ನು ಒಳಗೆ ಕರೆದು ಅವರ ಸಹಿಗಳನ್ನು ಪಡೆದು ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 29) ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಎಂ.ಒ.3 ನ್ನು ನಿಪಿ-7 ರಲ್ಲಿ ಕಾಣುವ ಮಹಿಳೆಯೇ ಪೋಲಿಸರಿಗೆ ಕೊಟ್ಟು ಆರೋಪಿಯು ತನ್ನನ್ನು ಬಲತ್ಕಾರ ಮಾಡುವುದಕ್ಕೆ ಪ್ರಯತ್ನಿಸಿದ ಕಾರಣ ಕೀಟನಾಶಕ ಕುಡಿದಿರುವುದಾಗಿ ತಿಳಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 30) ಪ್ರಾಸಾ-6 ಡಾಃ ನಾಗಸಿಂಹ.ಎಸ್ ರವರು ತಮ್ಮ ಸಾಕ್ಷ್ಯದಲ್ಲಿ ದಿ.21.11.2021 ರಂದು ಚಾಸಾ-1 ರವರು ವಿಷ ಕುಡಿದ ಸಂಬಂಧವಾಗಿ ಚಿಕಿತ್ಸೆಗೆಂದು ಆಸ್ಪತ್ರೆಗೆ ಹಾಜರಾಗಿದ್ದು, ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಸದರಿರವರ ಸ್ಟಮಕ್ ವಾಷ್ ನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ, ನಂತರ ಅವರನ್ನು ಹೆಚ್ಚುವರಿ ಚಿಕಿತ್ಸೆಗೆಂದು ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 31) ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.07.04.2022 ರಂದು ಮೂಡಿಗೆರೆ ಪೋಲಿಸರು ಪತ್ರ ಬರೆದು ತಜ್ಞರ ವರದಿ ಪರಿಶೀಲಿಸಿ ಅಭಿಪ್ರಾಯ ನೀಡುವಂತೆ ಸೂಚಿಸಿದ್ದು, ಸದರಿ ವರದಿಯನ್ನು ಪರಿಶೀಲಿಸಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 32) ಪ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪರಿಶೀಲಿಸಿದಾಗ ಚಾಸಾ-1 ರವರ ಸ್ಟಮಕ್ ವಾಷ್ ನಲ್ಲಿ Organophosphorus compound ಇರುವುದು ಪತ್ತೆಯಾಗಿರುತ್ತದೆ, ಈ ವಿಚಾರವಾಗಿ ಅವರ ಅಂತಿಮ ಅಭಿಪ್ರಾಯ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 33) ಪ್ರಾಸಾ-7 ಲೋಕನಾಥ್.ಬಿ. ರವರು ತಮ್ಮ ಸಾಕ್ಷ್ಯದಲ್ಲಿ ದಿ.22.11.2021 ರಂದು ಚಾಸಾ-24 ರವರು ಈ ಪ್ರಕರಣದ ಆರೋಪಿಯ ಪತ್ತೆಗಾಗಿ ಅವರನ್ನು ಮತ್ತು ಚಾಸಾ-12 ರವರನ್ನು ನೇಮಕ ಮಾಡಿ ಠಾಣೆಯಿಂದ ಕಳುಹಿಸಿಕೊಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 34) ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದರಂತೆ ಅವರುಗಳು ದಾರದಹಳ್ಳಿ ಗ್ರಾಮದ ಕಿತ್ತಲೆಗಂಡಿಗೆ ಹೋಗಿ ಬಾತ್ಮೀದಾರರನ್ನು ವಿಚಾರಿಸಿ ಬಾತ್ಮೀಯಂತೆ ಆರೋಪಿಯ ಮನೆಯ ಬಳಿ ಹೋಗಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 35) ಪ್ರಾಸಾ-7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಗೆ ಪ್ರಕರಣದ ಬಗ್ಗೆ ವಿಚಾರ ತಿಳಿಸಿ ಅವರನ್ನು ವಶಕ್ಕೆ ಪಡೆದು ಸ.6.30 ರ ಸಮಯಕ್ಕೆ ಠಾಣೆಗೆ ವಾಪಸ್ಸಾಗಿ ಆರೋಪಿಯನ್ನು ವರದಿಯೊಂದಿಗೆ ಚಾಸಾ-24 ರವರ ಸಮಕ್ಷಮ ಹಾಜರುಡಿಪಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 36) ಪ್ರಾಸಾ-8 ಪುಟ್ಟೇಗೌಡ.ಜಿ.ಕೆ ರವರು ತಮ್ಮ ಸಾಕ್ಷ್ಯದಲ್ಲಿ ದಿ.22.11.2021 ರಂದು ಚಾಸಾ-24 ರವರ ನಿರ್ದೇಶನದಂತೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿ, ಠಾಣೆಗೆ ವಾಪಸ್ಸಾಗಿ ಠಾಣಾ SHO ಆಗಿದ್ದ ಚಾಸಾ-23 ರವರ ಸಮಕ್ಷಮ ಹಾಜರುಪಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆ: 37) ಪ್ರಾಸಾ-9 ವೆಂಕಟೇಶ್ ಮೂರ್ತಿ.ಬಿ.ಎ ರವರು ತಮ್ಮ ಸಾಕ್ಷ್ಯದಲ್ಲಿ ದಿ.22.11.2021 ರಂದು ಅವರು ಠಾಣಾ SHO ಕರ್ತವ್ಯದಲ್ಲಿ ಇದ್ದಾಗ ಚಾಸಾ-22 ರವರು ಠಾಣೆಗೆ ಹಾಜರಾಗಿ ತಾವು ಹಾಸನದ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 38) ಪ್ರಾಸಾ-9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಹೇಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿಕೊಂಡು ಠಾ.ಮೊ.ಸಂ.192/2021 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡು, ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-24 ರವರಿಗೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 39) ಪ್ರಾಸಾ-10 ರವಿ.ಜಿ.ಎ ರವರು ತಮ್ಮ ಸಾಕ್ಷ್ಯದಲ್ಲಿ ದಿ.22.11.2021 ರಂದು ಪ್ರಕರಣದ ಕಡತವನ್ನು ಚಾಸಾ-23 ರವರಿಂದ ಪಡೆದು, ಅದೇ ದಿನ ಆರೋಪಿಗಳ ಪತ್ತೆಗಾಗಿ ಚಾಸಾ-11 ಮತ್ತು 12 ರವರನ್ನು ನೇಮಕ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 40) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಸ.6.30 ರ ಸಮಯ ಕ್ಕೆ ಠಾಣೆಯಲ್ಲಿ ಆರೋಪಿಯನ್ನು ವರದಿಯೊಂದಿಗೆ ಅವರ ಮುಂದೆ ಹಾಜರುಪಡಿಸಿದ್ದು, ನಂತರ ಅವರು ಆರೋಪಿಯನ್ನು ವಿಚಾರಣೆ ಮಾಡಿ, ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆ: 41) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯನ್ನು ದಸ್ತಗಿರಿ ನಿಯಮವನ್ನು ಪಾಲನೆ ಮಾಡಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿ, ದಿ.02.12.2021 ರಂದು ನ್ಯಾಯಾಲಯಕ್ಕೆ ಕಲಂ 164 ರಡಿಯಲ್ಲಿ ಹೇಳಿಕೆಯನ್ನು ಪಡೆದುಕೊಳ್ಳಲು ಮನವಿಯನ್ನು ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರ:

ಪ್ರಶ್ನೆಃ 42) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ನ್ಯಾಯಾಲಯದಿಂದ ಕಲಂ 164 ರ ಹೇಳಿಕೆಯನ್ನು ಸ್ವೀಕರಿಸಿ, ದಿ.04.12.2021 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಹಾಜರಿ ಸಿಕ್ಕ ಚಾಸಾ-7 ಮತ್ತು 8 ರವರಿಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 43) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದ ಮಹಜರ್ ಕ್ರಮವನ್ನು ಜರುಗಿಸಿ, ಸದರಿ ಮಹಜರ್ ನ್ನು ಬೆ.11.45 ರಿಂದ 12.45 ರವರೆಗೂ ಚಾಸಾ-7 ಮತ್ತು 8 ರವರ ಸಮಕ್ಷಮ ಜರುಗಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 44) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಸಮಯದಲ್ಲಿ ಚಾಸಾ-1 ರವರು ಒಂದು ನೈಟಿಯನ್ನು ಹಾಜರುಪಡಿಸಿದ್ದು, ಸದರಿ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಒಂದು ಫೋಟೋವನ್ನು ತೆಗೆದಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 45) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಠಾಣೆಗೆ ಬಂದು ಮಹಜರ್ ಕಾಲದಲ್ಲಿ ವಶಕ್ಕೆ ಪಡೆದ ಒಂದು ನೈಟಿಯನ್ನು ಠಾ.ಮಾ.ಸಂ.223/2021 ರಡಿಯಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 46) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.04.12.2021 ರಂದು ಚಾಸಾ-4 ರಿಂದ 6 ಮತ್ತು 2 ರವರ ಹೇಳಿಕೆಯನ್ನು ಪಡೆದು, ದಿ.06.12.2021 ರಂದು ಕಲಂ 65 ಬಿ ರಡಿಯ ದೃಢೀಕೃತ ಪ್ರತಿಯನ್ನು ಚಾಸಾ-16 ರವರಿಂದ ಸ್ವೀಕರಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 47) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.05.12.2021 ರಂದು ಕಲಂ 91 Cr.P.C. ರಡಿಯಲ್ಲಿ ಚಾಸಾ-1 ರವರಿಗೆ ನೋಟೀಸನ್ನು ಜಾರಿ ಮಾಡಿ, ದಿ.06.12.2021 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ದಿ.21.11.2021 ರಂದು ಕೃತ್ಯಕ್ಕೆ ಉಪಯೋಗಿಸಿದ ಕವರ್ ನ್ನು ಹಾಜರುಪಡಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 48) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ವಸ್ತುವನ್ನು ಚಾಸಾ-9 ಮತ್ತು 10 ರವರ ಸಮಕ್ಷಮ ಮಹಜರ್ ಕ್ರಮವನ್ನು ಜರುಗಿಸಿ ಅಮಾನತುಪಡಿಸಿಕೊಂಡು, ಸದರಿ ಸಮಯದಲ್ಲಿ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 49) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ವಶಪಡಿಸಿಕೊಂಡ ವಸ್ತುವನ್ನು ಠಾ.ಮಾ.ಸಂ.227/2021 ರಲ್ಲಿ ನಮೂದಿಸಿ, ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು, ಅದೇ ದಿನ ಚಾಸಾ-18 ರವರಿಂದ Stomach wash ಪಡೆದುಕೊಂಡು, ಠಾಣಾ ಮಾಲು ಪಟ್ಟಿ 228/2021 ರಲ್ಲಿ ನಮೂದು ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 50) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.14.12.2021 ರಂದು ವಶಪಡಿಸಿಕೊಂಡಂತಹ Stomach wash ಮತ್ತು Pesticides ನ್ನು ಚಾಸಾ-20 ರವರ ಮುಖೇನ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 51) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.20.12.2021 ರಂದು ಚಾಸಾ-19 ರವರಿಗೆ ಕೃತ್ಯ ನಡೆದ ಸ್ಥಳದ ವರದಿಯನ್ನು ಕೋರಿ ಮನವಿ ಮಾಡಿ, ದಿ.24.12.2021 ರಂದು ಚಾಸಾ-19 ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 52) ಪ್ರಾಸಾ-10 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.11.01.2022 ರಂದು ಚಾಸಾ-18 ರವರಿಂದ ಗಾಯದ ದೃಢೀಕರಣ ಪತ್ರವನ್ನು ಕೋರಿ ಮನವಿಯನ್ನು ಮಾಡಿ, ದಿ.14.01.2022 ರಂದು ಚಾಸಾ-18 ರವರಿಂದ ವರದಿಯನ್ನು ಸ್ವೀಕರಿಸಿ, ದಿ.28.03.2022 ರಂದು ಚಾಸಾ-17 ರವರಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 53) ಪ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.07.03.2022 ರಂದು

ಚಾಸಾ-18 ರವರಿಂದ ಚಾಸಾ-17 ರವರು ನೀಡಿದ ವರದಿಯನ್ನು ಕುರಿತು ಅಭಿಪ್ರಾಯವನ್ನು ಪಡೆದು, ದಿ.22.11.2021 ರಂದು ಚಿಕ್ಕಮಗಳೂರು, SDPO ರವರಿಗೆ ಮನವಿಯನ್ನು ಮಾಡಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 54) ಪ್ರಾಸಾ-12 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅದೇ ದಿನ ಸದರಿಯವರ ವರದಿಯನ್ನು ನೀಡಿದ್ದು, ದಿ.11.04.2022 ರಂದು ತನಿಖೆಯು ಪೂರ್ಣಗೊಂಡಿದ್ದು, ಆರೋಪಿಯ ವಿರುದ್ಧ ಆರೋಪವು ಸಾಬೀತಾದ ಕಾರಣ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ

ಪ್ರಶ್ನೆಃ 55) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಉತ್ತರಃ

ಪ್ರಶ್ನೆಃ 56) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

Sd/-
C/c ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ
ದಿನಾಂಕಃ 06.03.2026.